# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 409 |
| ಸದಸ್ಯರ ಹೆಸರು | : | ಡಾ\|\| ತೇಜಸ್ವಿನಿ ಗೌಡ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 19-12-2022 |
| ಉತ್ತರಿಸುವವರು | : | ಸನ್ಮಾನ್ಯ ಮುಖ್ಯಮಂತ್ರಿಯವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ವನ್ಯಜೀವಿಗಳ ಸಂಚಾರ / ಸಂತಾನೋತ್ಪತ್ತಿಗೆ ಪೂರಕ ಪರಿಸರದ ಮೇಲೆ ಆಗಿರುವ ಪರಿಣಾಮ ಕುರಿತು ಅಧ್ಯಯನ ಆಗಿದೆಯೇ; (ವಿವರ ನೀಡುವುದು) | ಯಾವುದೇ ಅಧ್ಯಯನ ಕೈಗೊಂಡಿರುವುದಿಲ್ಲ. |
| ಆ) | ಆನೆ ಹಾಗೂ ಇತರೆ ವನ್ಯಜೀವಿ ರಕ್ಷಕ ಸಿಬ್ಬಂದಿಗಳಾದ ಮಾವುತ, ಕಾವಾಡಿ, ವೈದ್ಯರುಗಳಿಗೆ ಸೂಕ್ತ ವಸತಿಸೌಕರ್ಯ ಹಾಗೂ ಇತರೆ ಸೌಲಭ್ಯ ಕಲ್ಪಿಸಲಾಗಿದೆಯೇ; (ವಿವರ ಒದಗಿಸುವುದು) | ಮಾವುತ, ಕಾವಾಡಿ ಮತ್ತು ವನ್ಯಜೀವಿ ರಕ್ಷಕ ಸಿಬ್ಬಂದಿಗಳಿಗೆ ಲಭ್ಯವಿರುವ ಇಲಾಖಾ ವಸತಿಗೃಹಗಳ ಸೌಕರ್ಯಗಳನ್ನು ಕಲ್ಪಿಸಲಾಗಿರುತ್ತದೆ. ಅವರಿಗೆ ನಿಯಮಾನುಸಾರ ವೇತನಭತ್ಯೆಗಳನ್ನು ಪಾವತಿಸಲಾಗುತ್ತಿದೆ. ಸದರಿ ಸಿಬ್ಬಂದಿ/ನೌಕರರಿಗೆ ಸರ್ಕಾರವು ಕಾಲಕಾಲಕ್ಕೆ ನಿಗದಿಪಡಿಸುವ ವೇತನ ದರಗಳನ್ವಯ ಪಾವತಿಸಲಾಗುತ್ತಿದೆ.<br><br>ಮುಂದುವರೆದು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 20 ಎಸ್‌ಆರ್‌ಪಿ 2016 ದಿನಾಂಕ: 04-05-2016 ರ ಪ್ರಕಾರ ಮಂಜೂರಾದಂತೆ ಅರಣ್ಯ ಇಲಾಖೆಯ ವನ್ಯಜೀವಿ ವಿಭಾಗಗಳಲ್ಲಿ ಕರ್ತವ್ಯನಿರ್ವಹಿಸುತ್ತಿರುವ ಮುಂಚೂಣಿ ಸಿಬ್ಬಂದಿಗಳಿಗೆ ವಿಶೇಷಭತ್ಯೆಯನ್ನು ಪಾವತಿಸಲಾಗುತ್ತಿದೆ.<br><br>ಗುತ್ತಿಗೆ/ಹೊರಗುತ್ತಿಗೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮಾವುತ/ಕಾವಾಡಿ/ ಅರಣ್ಯ ವೀಕ್ಷಕರುಗಳಿಗೆ ಗುಂಪು ವಿಮಾ ಯೋಜನೆ, ಇ.ಎಸ್.ಐ. ಮತ್ತು ಇ.ಪಿ.ಎಫ್ ಸೌಲಭ್ಯವನ್ನು ಕಲ್ಪಿಸಲಾಗಿರುತ್ತದೆ.<br><br>ವನ್ಯಜೀವಿ ರಕ್ಷಣಾ ಸಿಬ್ಬಂದಿಗಳು ಗಸ್ತು ತಿರುಗಲು ಅನುವಾಗುವಂತೆ ಅಗತ್ಯವಾದ ಸಮವಸ್ತ್ರ, ರೈನ್‌ಕೋಟ್, ಶೂ ಮತ್ತು ನೀರಿನ ಬಾಟಲ್‌ಗಳ ಸೌಲಭ್ಯವನ್ನು ಕಲ್ಪಿಸಲಾಗಿರುತ್ತದೆ.<br><br>ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮದನ್ವಯ ಪಶುವೈದ್ಯಾಧಿಕಾರಿಗಳು ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಯಿಂದ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿದ್ದು, ಅವರಿಗೆ ನಿಯಮಾನುಸಾರ ಚಾಲ್ತಿಯಲ್ಲಿರುವ ವೇತನ ಮತ್ತು ಭತ್ಯೆಯನ್ನು ಪಾವತಿಸಲಾಗುತ್ತಿದೆ. ತುರ್ತು ಸಂದರ್ಭಗಳಲ್ಲಿ ಪಶುವೈದ್ಯಾಧಿಕಾರಿಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲಾಗುತ್ತಿದೆ. |

| | | |
|---|---|---|
| ಇ) | ರಾಜ್ಯದಲ್ಲಿ ಯಾವ ರೀತಿಯ ವನ್ಯಜೀವಿ ವೃದ್ಧಿಗೆ ಪೂರಕ ಪರಿಸರವಿದೆ; ಈ ವೃದ್ಧಿಗೆ ಕೈಗೊಳ್ಳಲಾಗಿರುವ ವಿಶೇಷ ಕ್ರಮಗಳಾವುವು? | ವನ್ಯಜೀವಿಗಳ ವೃದ್ಧಿಗೆ ರಾಜ್ಯದಲ್ಲಿ ಪೂರಕ ಪರಿಸರವಿದ್ದು, ರಾಜ್ಯದಲ್ಲಿ 5 ರಾಷ್ಟ್ರೀಯ ಉದ್ಯಾನವನ, 33 ಅಭಯಾರಣ್ಯಗಳು (5 ಹುಲಿ ಸಂರಕ್ಷಿತ ಪ್ರದೇಶಗಳನ್ನು ಒಳಗೊಂಡಂತೆ), 15 ಸಂರಕ್ಷಿತ ಮೀಸಲು ಮತ್ತು 1 ಸಮುದಾಯ ಮೀಸಲು ಪ್ರದೇಶಗಳಿರುತ್ತವೆ. ಸಮಗ್ರ ರಕ್ಷಣೆ ಮತ್ತು ಸಂರಕ್ಷಣಾ ಕ್ರಮಗಳಿಂದ ರಾಜ್ಯದ ಅರಣ್ಯ ಪ್ರದೇಶಗಳಲ್ಲಿ 2017ರ ಹುಲಿಗಣತಿ ಪ್ರಕಾರ ಒಟ್ಟು 524 ಹುಲಿಗಳಿದ್ದು, ಕರ್ನಾಟಕವು ರಾಷ್ಟ್ರದಲ್ಲಿಯೇ ಎರಡನೇ ಅತಿ ಹೆಚ್ಚಿನ ಹುಲಿಗಳಿರುವ ರಾಜ್ಯವೆಂದು ಗುರುತಿಸಲ್ಪಟ್ಟಿರುತ್ತದೆ. ಅಲ್ಲದೆ 2017ರಲ್ಲಿ ನಡೆಸಿದ ಆನೆಗಣತಿ ಪ್ರಕಾರ 6049 ಆನೆಗಳು ರಾಜ್ಯದಲ್ಲಿ ಇದ್ದು, ದೇಶದ ಆನೆ ಸಂಖ್ಯೆಯ ಶೇ.25 ರಷ್ಟು ರಾಜ್ಯವು ಹೊಂದಿದ್ದು, ಕರ್ನಾಟಕ ರಾಜ್ಯವು ಆನೆಗಳ ಸಂಖ್ಯೆಯಲ್ಲಿ ರಾಷ್ಟ್ರದಲ್ಲಿಯೇ ಪ್ರಥಮ ಸ್ಥಾನವನ್ನು ಹೊಂದಿರುತ್ತದೆ. ಇದಲ್ಲದೇ ವನ್ಯಜೀವಿಗಳ ಸಂಖ್ಯೆಯಲ್ಲಿಯೂ ಸಹ ಗಣನೀಯವಾಗಿ ಹೆಚ್ಚಳವಾಗಿರುತ್ತದೆ. |

**ಸಂಖ್ಯೆ: ಅಪಜೀ 174 ಎಫ್‌ಡಬ್ಲ್ಯೂಎಲ್ 2022**

**(ಬಸವರಾಜ ಬೊಮ್ಮಾಯಿ)**
ಮುಖ್ಯಮಂತ್ರಿ